# ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 753 |
| ಪ್ರಶ್ನೆಯನ್ನು ಕೇಳಿರುವವರು | ಶ್ರೀ ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 16-12-2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲಾ ತಾಲ್ಲೂಕು ಮತ್ತು ಹೋಬಳಿ ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿ ಗ್ರಾಮೀಣ ಪ್ರದೇಶದ ಬಡ ರೋಗಿಗಳಿಗೆ ಖಾಸಗಿ ಮೆಡಿಕಲ್ ಸ್ಟೋರ್‌ಗಳಲ್ಲಿ ಔಷಧಿ ಖರೀದಿಸಲು ವೈದ್ಯರು ಚೀಟಿ ಬರೆದು ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಆ) | ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವ ಗ್ರಾಮೀಣ ಪ್ರದೇಶದ ಬಡ ರೋಗಿಗಳು ಔಷಧಿಗಳ ವೆಚ್ಚ ಭರಿಸಲಾಗದೆ, ಅನಾರೋಗ್ಯದಿಂದ ಬಳಲುತ್ತಿರುವುದಕ್ಕೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ; | **ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಜಿಲ್ಲಾವಾರು ಅನುದಾನ ಹಂಚಿಕೆಯ ಬಗ್ಗೆ ಮಾಹಿತಿ** (see table below) |

**Unit cost wise Details**

| Sl. No | Facilities | Total Amount release per Facility ( in Rs.) |
|---|---|---|
| 1 | Sub Centre | 9,600/- |
| 2 | Primary Health Centres | 36,000/- |
| 3 | Community Health Centers | 72,000/- |
| 4 | Taluka Hospital | 1,20,000/- |
| 5 | District Hospital | 1,92,000/- |
| 6 | State Level Hospital | 1,92,000/- |

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಮಾರ್ಗಸೂಚಿ ಅನ್ವಯ ಶೇ 20% ರಷ್ಟು ಅನುದಾನವನ್ನು ರಾಜ್ಯದ ಆರೋಗ್ಯ ಸಂಸ್ಥೆಗಳಿಗೆ (ಜಿಲ್ಲಾ ಆಸ್ಪತ್ರೆ, ತಾಲ್ಲೂಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ) ಸ್ಥಳೀಯವಾಗಿ ಅಗತ್ಯ ಔಷಧಿಗಳನ್ನು ಖರೀದಿಸಲು ಆರೋಗ್ಯ ಸಂಸ್ಥೆಗಳಿಗೆ ಅನುದಾನವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು **ರೂ.1818.24 ಲಕ್ಷಗಳನ್ನು** ಜಿಲ್ಲಾವಾರು ಹಂಚಿಕೆ ಮಾಡಲಾಗಿರುತ್ತದೆ.

ಉಳಿಕೆ ಅನದಾನದಲ್ಲಿ Programmatic Drugs ಖರೀದಿಸಲು KSMSCL ಗೆ Indent ನೀಡಲಾಗಿದೆ.

ಇ) ಸರ್ಕಾರಿ ಆಸ್ಪತ್ರೆಗಳ ವೈದ್ಯರುಗಳು ಬಡ ರೋಗಿಗಳಿಗೆ ಹೊರಗಡೆ ಔಷಧಿಗಳನ್ನು ಖರೀದಿಸಲು ಅವಕಾಶ ಕೊಡದೆ, ಸಾಧ್ಯವಾದಷ್ಟು ಆಸ್ಪತ್ರೆಯಲ್ಲಿಯೇ ಒದಗಿಸಬೇಕೆಂದು 2017 ರಲ್ಲಿನ ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದಿರಲು ಕಾರಣವೇನು;

ಸರ್ಕಾರಿ ಆಸ್ಪತ್ರೆಗಳ ವೈದ್ಯರುಗಳು ಬಡ ರೋಗಿಗಳಿಗೆ ಹೊರಗಡೆ ಔಷಧಿಗಳನ್ನು ಖರೀದಿಸಲು ಅವಕಾಶ ಕೊಡದೆ, ಸಾಧ್ಯವಾದಷ್ಟು ಆಸ್ಪತ್ರೆಯಲ್ಲಿಯೇ ಒದಗಿಸಬೇಕೆಂದು 2017 ರಲ್ಲಿನ ಸರ್ಕಾರಿ ಆದೇಶದಂತೆ ಕೆ.ಎಸ್.ಎಂ.ಎಸ್.ಸಿ.ಎಲ್‌ಸಂಸ್ಥೆಯಿಂದ ವಾರ್ಷಿಕ ಬೇಡಿಕೆ ಅನ್ವಯ ಟೆಂಡರ್ ಆಹ್ವಾನಿಸಿ ಅಂತಿಮಗೊಳಿಸಿದ ಔಷಧಗಳನ್ನು, ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ರೋಗಿಗಳ ಚಿಕಿತ್ಸೆಗಾಗಿ (Free of cost) ಎಲ್ಲಾ ರೀತಿಯ ಔಷಧಗಳು ಜಿಲ್ಲಾ ಔಷಧ ಉಗ್ರಾಣಗಳ ಮುಖಾಂತರ ಸರಬರಾಜು ಮಾಡಲಾಗುತ್ತಿದೆ, ಮತ್ತು ಅವಶ್ಯಕ ತುರ್ತು ಔಷಧಿಗಳನ್ನು ABARK, ARS ಹಾಗೂ NFDS ಗಳ ಮುಖಾಂತರ ಖರೀದಿಸಲು ಸೂಚಿಸಲಾಗಿರುತ್ತದೆ.

ಈ) ಗ್ರಾಮೀಣ ಪ್ರದೇಶದ ಬಡರೋಗಿಗಳಿಗೆ ಕನಿಷ್ಟ ಔಷಧಿ ಮತ್ತು ಪ್ರಯೋಗಾಲಯಗಳ ಪರೀಕ್ಷೆಗಳನ್ನು ಕೈಗೊಳ್ಳಲು ಸರ್ಕಾರಿ ಆಸ್ಪತ್ರೆಗಳನ್ನು ಸುಧಾರಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

**ಅ) ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಜಿಲ್ಲಾವಾರು ಅನುದಾನ ಹಂಚಿಕೆಯ ಬಗ್ಗೆ ಮಾಹಿತಿ**

**Table showing Fund releases under National Free Diagnostic Services programme, institution Unit cost wise Details**

| Sl.No | Facility | Unit Cost released per Facility ( in Rs.) |
|---|---|---|
| 1 | Community Health Center | 51491/- |
| 2 | Taluka Hospital | 78000/- |
| 3 | District Hospital | 120000/- |
| 4 | State Level Hospital | 120000/- |

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಆರ್.ಓ.ಪಿ 2024-25 ರಲ್ಲಿ ರೂ.2463.54 ಲಕ್ಷಗಳ ಅನುದಾನ ಅನುಮೋದನೆಗೊಂಡಿದ್ದು, ಮಾರ್ಗಸೂಚಿ ಅನ್ವಯ ಶೇ 10% ಅನುದಾನವನ್ನು ರಾಜ್ಯದ ಆರೋಗ್ಯ ಸಂಸ್ಥೆಗಳಿಗೆ (ಜಿಲ್ಲಾ ಆಸ್ಪತ್ರೆ, ತಾಲ್ಲೂಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಿಗೆ) ಪ್ರಯೋಗಶಾಲೆ ವಿಭಾಗದಲ್ಲಿ ಲಭ್ಯವಿರುವ ಉಪಕರಣಗಳಿಗೆ Reagents, Lab consumables & Diagnostic Kits ಗಳನ್ನು ಸ್ಥಳೀಯವಾಗಿ ಖರೀದಿಸಲು ಆರೋಗ್ಯ ಸಂಸ್ಥೆಗಳಿಗೆ ಅನುದಾನವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು **ರೂ. 246.35 ಲಕ್ಷಗಳನ್ನು** ಜಿಲ್ಲಾವಾರು ಹಂಚಿಕೆ ಮಾಡಲಾಗಿರುತ್ತದೆ. ಉಳಿದ ಅನುದಾನ ಹಂಚಿಕೆ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಉಪ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ

ಪ್ರಯೋಗಶಾಲೆ ಪರೀಕ್ಷೆಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ಒದಗಿಸಲು Reagents, Lab consumables & Diagnostic Kits ಗಳನ್ನು ಸ್ಥಳೀಯವಾಗಿ ಖರೀದಿಸಲು ಆರೋಗ್ಯ ಸಂಸ್ಥೆಗಳಿಗೆ ಅನುದಾನವನ್ನು ಅನುದಾನವನ್ನು ಜಿಲ್ಲಾವಾರು ಆರ್ಥಿಕ ಸಾಲು 2021-22ನೇ ಸಾಲಿನ ಮತ್ತು 2023-24 ನೇ ಸಾಲಿನ ಅನುಮೋದಿತ ಅನುದಾನದಲ್ಲಿ ಕ್ರಮವಾಗಿ ಮಾರ್ಗಸೂಚಿ ಮತ್ತು State Level Committee ಅನುಮೋದನೆಯ ಅನ್ವಯ ರೂ.89.55 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಒಟ್ಟು ರೂ.64.25 ಕೋಟಿಗಳನ್ನು ಬಳಸಲಾಗಿದ್ದು ಬಾಕಿ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.

**ಆ) ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಜಿಲ್ಲಾವಾರು ಅನುದಾನ ಹಂಚಿಕೆಯ ಬಗ್ಗೆ ಮಾಹಿತಿ**

| Unit cost wise Details | | |
|---|---|---|
| **Sl. No** | **Facilities** | **Total Amount release per Facility ( in Rs.)** |
| 1 | Sub Centre | 9600/- |
| 2 | Primary Health Centres | 36000/- |
| 3 | Community Health Centers | 72000/- |
| 4 | Taluka Hospital | 120000/- |
| 5 | District Hospital | 192000/- |
| 6 | State Level Hospital | 192000/- |

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಆರ್.ಓ.ಪಿ 2024-25 ರಲ್ಲಿ ರೂ.9091.20 ಲಕ್ಷಗಳು ಅನುದಾನ ಅನುಮೋದನೆಗೊಂಡಿದ್ದು ಮಾರ್ಗಸೂಚಿ ಅನ್ವಯ ಶೇ 20% ರಷ್ಟು ಅನುದಾನವನ್ನು ರಾಜ್ಯದ ಆರೋಗ್ಯ ಸಂಸ್ಥೆಗಳಿಗೆ (ಜಿಲ್ಲಾ ಆಸ್ಪತ್ರೆ, ತಾಲ್ಲೂಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ) ಸ್ಥಳೀಯವಾಗಿ ಅಗತ್ಯ ಔಷಧಿಗಳನ್ನು ಖರೀದಿಸಲು ಆರೋಗ್ಯ ಸಂಸ್ಥೆಗಳಿಗೆ ಅನುದಾನವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು **ರೂ.1818.24 ಲಕ್ಷಗಳನ್ನು** ಜಿಲ್ಲಾವಾರು ಹಂಚಿಕೆ ಮಾಡಲಾಗಿರುತ್ತದೆ.

**2024-25ನೇ ಸಾಲಿನ CT & MRI Scan ಅನುದಾನದ ವಿವರಗಳು:**

| ಕ್ರ. ಸಂ | ಸೇವೆಗಳ ವಿವರ | ರಾಜ್ಯ ಅನುದಾನದ ವಿವರ ರೂ. ಲಕ್ಷಗಳಲ್ಲಿ | ರಾಷ್ಟ್ರೀಯ ಆರೋಗ್ಯ ಅಭಿಯಾನದ NFDS ಅನುದಾನದ ವಿವರ ರೂ. ಲಕ್ಷಗಳಲ್ಲಿ | ಕ್ರೋಢಿಕರಿಸಿದ ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|
| 1 | 15 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ ಸ್ಕ್ಯಾನ್ ಸೇವೆಗಳನ್ನು ಹಾಗೂ 6 ಜಿಲ್ಲಾ ಆಸ್ಪತ್ರೆಗಲ್ಲಿ ಎಂ ಆ ರ್ ಐ ಸೇವೆಗಳನ್ನು ಒದಗಿಸಲು. | 1551.25 | 4798.55 | 6349.8 |
| 2 | 5 ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಸಿ.ಟಿ ಸ್ಕ್ಯಾನ್ ಸೇವೆಗಳನ್ನು ಹಾಗೂ 15 ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಎಂ ಆರ್ ಐ ಸೇವೆಗಳನ್ನು ಹೆಚ್ಚುವರಿಯಾಗಿ ಒದಗಿಸಲು. | 0 | 3175.00 | 3175.00 |
| **ಒಟ್ಟು ಮೊತ್ತ** | | **1551.25** | **7973.55** | **9524.80** |

**CT & MRI Scan ಸೇವೆಗಳ ಭೌತಿಕ ಪ್ರಗತಿಯ ವಿವರಗಳು:**

1. CT Scan ಸೇವೆಗಳನ್ನು ಆರ್ಥಿಕ 2018-19 ನೇ ಸಾಲಿನಿಂದ ನವೆಂಬರ್ 2024 ರವರೆಗೆ ಒಟ್ಟು 10,72,742 ಸಂಖ್ಯೆಗಳ CT Scan ಸೇವೆಯನ್ನು ಒದಗಿಸಲಾಗಿರುತ್ತದೆ.

| | | |
|---|---|---|
| | | 2. MRI Scan ಸೇವೆಗಳನ್ನು ಆರ್ಥಿಕ 2018-19 ನೇ ಸಾಲಿನಿಂದ ನವೆಂಬರ್ 2024 ರವರೆಗೆ ಒಟ್ಟು 4,11,850 ಸಂಖ್ಯೆಗಳ MRI Scan ಸೇವೆಯನ್ನು ಒದಗಿಸಲಾಗಿರುತ್ತದೆ. (ಎರಡನೇ ಹಂತದ CT &MRI Scan ಸೇವೆಗಳ ವಿಸ್ತರಣಾ ಹಂತವು ಪ್ರಗತಿಯಲ್ಲಿರುತ್ತದೆ.)<br>3. ಉಚಿತ X-ray ಸೇವೆಗಳ ವಿಭಾಗದಲ್ಲಿ ಆರ್ಥಿಕ 2018-19 ನೇ ಸಾಲಿನಿಂದ ನವೆಂಬರ್ 2024ರವರೆಗೆ ಒಟ್ಟು 164 ಸಂಖ್ಯೆಗಳ Computed Radiography System ಗಳನ್ನು ಬಳಸಿ ಸೇವೆಯನ್ನು ಒದಗಿಸಲಾಗಿರುತ್ತದೆ. |

**HFW 85 STQ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು